Indian Journal of History and Archaeology

ISSN (E):2582-225X
VOL-2, ISSUE -6, MAR-APRIL, 2021, 29-44

# ಏಕೀಕೃತ ಕರ್ನಾಟಕ ದಲಿತ ಸಂಘರ್ಷ ಸಮಿತಿಯಲ್ಲಿ ಬಿರುಕು: ಒಡೆದ ಕನ್ನಡಿಯಾದ ಸಂಘಟನೆ

**ಡಾ. ಕೆ. ಗುರುಸ್ವಾಮಿ**

**ಡಾ. ಕೆ. ಗುರುಸ್ವಾಮಿ**
**ಸಮಾಜ-ವಿಜ್ಞಾನ ಶಿಕ್ಷಕರು**
**ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ,**
**ಹೊಳೆನರಸೀಪುರ, ಹಾಸನ.**

'ಸರ್ವ ಜನೋ ಸುಖಿನೋ ಭವಂತೂ' ಎಂಬ ಉಕ್ತಿಯಂತೆ ಸಮಸ್ತ ಜನತೆಯ ಒಳಿತಿಗೆ ಕೆಡುಕನ್ನು ಬಯಸದೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ತತ್ವಗಳ ಅಡಿಯಲ್ಲಿ ಕೆಲವು ಜನಪರ ಸಂಘಟನೆಗಳ ಸಂಘಟಕರು, ಕಾರ್ಯಕರ್ತರು, ಪದಾಧಿಕಾರಿಗಳು ಸಮಾನತೆಯ ವಿರೋಧಿಗಳ ವಿರುದ್ಧ ಸುಶಿಕ್ಷಿತರಾಗಿ ಬೌದ್ಧಿಕಯುಕ್ತಿ ಮತ್ತು ಭೌತಿಕಶಕ್ತಿಯಿಂದ ಪೈಲ್ವಾನ್‌ಗಳ ರೀತಿಯಲ್ಲಿ ತೊಡೆತಟ್ಟಿ ಮುನುಗ್ಗಿದ್ದರು.ಇವರು ಜಾತೀಯತೆಯ ರಣರಂಗದಲ್ಲಿ ಜಾತಿವಿನಾಶಕ್ಕಾಗಿ ಜಾತೀವಾದಿ ಸ್ಪೃಶ್ಯ ಸಮುದಾಯಗಳು, ಭ್ರಷ್ಟ ರಾಜಕಾರಣಿಗಳು, ಅಸಹಾಯಕ ಜಾತಿಗಳ ಮೇಲಿನ ಪೊಲೀಸರ ಅಟ್ಟಹಾಸ, ಭೂಮಾಲೀಕರು, ಭೂಒಡೆಯರ ದಬ್ಬಾಳಿಕೆಗಳ ವಿರುದ್ಧ ಕ್ರಾಂತಿಕಾರಿ ಘೋಷಣೆ, ಕ್ರಾಂತಿಗೀತೆಗಳ ಮೂಲಕ ಹೋರಾಟ ಮಾಡಿದ್ದರು. ಹೀಗೆ ಜಾತೀಯತೆಯ ಅಮಾನವೀಯ ಶತೃಗಳ ವಿರುದ್ಧ ಶುದ್ಧ ಹಾಲಿನಂತೆ ಒಗ್ಗಟ್ಟಿನಿಂದ ಕಾಡ್ಗಿಚ್ಚಿನ ಶರವೇಗದಲ್ಲಿ ಆಂದೋಲನವನ್ನು ಕೈಗೊಂಡು ಶೋಷಕರಿಗೆ ಮೈನಡುಕವನ್ನು ಹುಟ್ಟಿಸಿದ ಸಂಘಟನೆಗಳ ಕ್ಷಿಪ್ರಕ್ರಾಂತಿಗೆ ಹುಳಿಹಿಂಡಿಬ್ರಿಟಿಷರ ಒಡೆದು ಆಳುವ ನೀತಿಯ ಮೂಲಕ ಜಾತಿವಾದಿ ಹೊಣೆಗೇಡಿಗಳು ಇದರ ತೀವ್ರತೆಗೆ ತಣ್ಣೀರೆರಚಿದರು.ಇದರಿಂದಾಗಿ ಈ ಸಂಘಟನೆಗಳಲ್ಲಿ ಆಂತರಿಕ ಭಿನ್ನಾಭಿಪ್ರಾಯಗಳ ಬಿಕ್ಕಟ್ಟು ಉಲ್ಬಣವಾಗಿ ವಿಘಟನೆಯ ಹಾದಿ ಹಿಡಿದವು.ಹೀಗಾಗಿ ಇಂತಹ ಸಂಘಟನೆಗಳ ಸಾಲಿನಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಕ.ದ.ಸಂ.ಸ.) ಬಂದು ನಿಲ್ಲುತ್ತದೆ.ಆದುದರಿಂದ ಈ ಲೇಖನದಲ್ಲಿ ಕ.ದ.ಸಂ.ಸ.ದಲ್ಲಾದ ಆಂತರಿಕ ಬಿಕ್ಕಟ್ಟಿಗೆ ಕಾರಣಗಳು ಹಾಗೂ ಚೂರುಚೂರಾಗಿ ಛಿದ್ರಗೊಂಡ ಹಂತಗಳನ್ನು ಸವಿವರವಾಗಿ ಪ್ರಸ್ತುತಪಡಿಸಲು ಪ್ರಯತ್ನಿಸಿದ್ದೇನೆ.

- **ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಚನೆ ಹಾಗೂ ಹೋರಾಟದಸ್ವರೂಪ:**

ಮೈಸೂರಿನಲ್ಲಿ ಘಟಿಸಿದ ಕರ್ನಾಟಕ ಸರ್ಕಾರದ ಮಾಜಿ ಪೌರಾಡಳಿತ ಸಚಿವರಾಗಿದ್ದ ಬಿ.ಬಸವಲಿಂಗಪ್ಪರವರ 'ಬೂಸಾ ಪ್ರಕರಣ' (1973) ದ ಹಿನ್ನಲೆಯಲ್ಲಿ ರಚನೆಯಾಗಿ ರಾಜ್ಯದ ಏಕೀಕೃತ ದಲಿತ ಸಂಘಟನೆಯೊಂದರ ಅಸ್ತಿತ್ವಕ್ಕಾಗಿ ದಿನಗಣನೆ ಮಾಡುತ್ತಿದ್ದ 'ಕರ್ನಾಟಕ ದಲಿತ ಬರಹಗಾರ ಮತ್ತು ಕಲಾವಿದ'ರ ಒಕ್ಕೂಟ'ದ ಚಿಂತಕರು ಹಾಗೂ ರಾಜ್ಯದ ಇನ್ನಿತರ ದಲಿತ ಸಂಘಟನೆಗಳ ನಾಯಕರುಗಳು 1977ರಲ್ಲಿ ಚಿಕ್ಕಮಗಳೂರಿನಲ್ಲಿ ಒಂದಾಗಿ ಶಿವಮೊಗ್ಗದ ಭದ್ರಾವತಿಯಲ್ಲಿ ಬಿ.ಕೃಷ್ಣಪ್ಪ ಹಾಗೂ ಪ್ರಮುಖ ಸಹಪಾಠಗಳಿಂದ ಸ್ಥಾಪಿತ ದ.ಸಂ.ಸ.ವನ್ನು ತಮ್ಮ ರಾಜ್ಯ ಸಂಘಟನೆಯಾಗಿ ಒಪ್ಪಿಕೊಂಡರು. ಹೀಗಾಗಿ ದ.ಸಂ.ಸ.ವು 'ಕರ್ನಾಟಕ ದಲಿತ ಸಂಘರ್ಷ ಸಮಿತಿ' (ಕ.ದ.ಸಂ.ಸ) ಎಂಬ ಹೆಸರಿನಿಂದ ನಾಮಾಂಕಿತಗೊಂಡು ಅಮೇರಿಕಾದ ಬ್ಲಾಕ್ ಪ್ಯಾಂಥರ್ಸ್ ಹಾಗೂ ಮಹಾರಾಷ್ಟ್ರದ ದಲಿತ್ ಪ್ಯಾಂಥರ್ಸ್‌ಗಳ ಮಾದರಿಯಲ್ಲಿ ರಾಜ್ಯದಾದ್ಯಂತ ಶೋಷಣೆಗಳ ವಿರುದ್ಧ ಬಾಯಿದ್ದರೂ ಪ್ರಶ್ನಿಸುವ ಧೈರ್ಯವಿಲ್ಲದೆ ಮೂಕವೇದನೆಯನ್ನು ಅನುಭವಿಸುತ್ತಿದ್ದ ದಲಿತರ ಜೀವನಾಡಿಯಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿತು.[1] ಇದರ ಸ್ಥಾಪನೆಯ ಹಿಂದೆ ಬಿ. ಕೃಷ್ಣಪ್ಪರವರ ಒಡನಾಡಿಗಳಾಗಿ ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಹೆಚ್. ಗೋವಿಂದಯ್ಯ, ಶಿವಾಜಿ ಗಣೇಶನ್, ರಾಮದೇವ ರಾಕೆ ಮುಂತಾದವರು ಕವಿಗಳಾಗಿ, ಕಲಿಗಳಾಗಿ ನಿರ್ವಹಿಸಿದ ಪಾತ್ರ ಚಿರಸ್ಮರಣೀಯವಾಗಿದೆ.[2]

ಇದು ರಾಜ್ಯದ ಏಕೀಕೃತ ಸಂಘಟನೆಯಾಗಿ ಹೊರಹೊಮ್ಮಿದ ತಕ್ಷಣದಿಂದಲೇ ದೇಶದ ಪ್ರಜಾತಾಂತ್ರಿಕ ಸಂವಿಧಾನದ ಮಾದರಿಯಂತೆ ಇದರ ರಾಜ್ಯಸಮಿತಿಯ ಸದಸ್ಯರೆಲ್ಲರೂ ಸೇರಿ ತನ್ನ ಸಂಘಟನಾ ಶಕ್ತಿ ಮತ್ತು ಭದ್ರತೆಗೆ ಸಹಕಾರಿಯಾಗುವಂತೆ ತನ್ನದೇ ಆದ 'ಸಂವಿಧಾನ'ವನ್ನು ರಚಿಸಿಕೊಂಡರು.ಜೊತೆಗೆ ಸಂಘಟನೆಯ ಮುಖವಾಣಿಯಾಗಿ 'ಪಂಚಮ' ಪತ್ರಿಕೆಯನ್ನು ಪ್ರಾರಂಭಿಸಿದರು. ಹಾಗೆಯೇ ಲಾಂಛನವಾಗಿ ಧೈರ್ಯದ ಸಂಕೇತವಾದ 'ನೀಲಿಬಣ್ಣದ ಬಾವುಟ ಹಾಗೂ ಕಸಪೊರಕೆ ಮತ್ತು ಪಿಕಾಸಿ' ಗುರುತಿನ ಚಿಹ್ನೆಯನ್ನು ಅಳವಡಿಸಿಕೊಂಡರು.ಸಮಾಜದಲ್ಲಿ ಶತಶತಮಾನಗಳಿಂದ ಸಮಾಜದಲ್ಲಿ 'ಜಾತೀಯತೆಯ ಕೊಳಕು' ಕಸವಾಗಿ ಜಡ್ಡುಗಟ್ಟಿ ಕೆಟ್ಟವಾಸನೆಯಿಂದ ನಾರುತ್ತಿದ್ದುದನ್ನು ಸಂಘಟನೆಯ ಪಿಕಾಸಿಯಿಂದ ಅಗೆದು ಹೋರಾಟವೆಂಬ ಪೊರಕೆಯಿಂದ ಸ್ವಚ್ಛಗೊಳಿಸಿ ಸಮಾನತೆಯ ನಿರ್ಮಲ ಬದುಕನ್ನು ಕಟ್ಟಿಕೊಳ್ಳುವುದು ಈ ಲಾಂಛನದ ಸಂಕೇತವಾಗಿತ್ತು.[3]

ಹೀಗೆ ಕ.ದ.ಸಂ.ಸ. ಏಕೀಕೃತ ಸಂಘಟನೆಯಾಗಿ ರಾಜ್ಯದಾದ್ಯಂತ ದಲಿತರ ಮೇಲೆ ಯಜಮಾನಿಕೆ ಮಾಡಿಕೊಂಡು ಜಾತೀಯತೆಯ ಕ್ರೌರ್ಯವನ್ನು ಎಸಗುತ್ತಿದ್ದ ಮನುವಾದಿ ಸವರ್ಣೀಯರ ವಿರುದ್ಧ ಕ್ರಾಂತಿಯ ಠೇಂಕಾರವನ್ನು ಮೊಳಗಿಸಿತ್ತು.ಜೊತೆಗೆ ದೇವಸ್ಥಾನ, ಕೆರೆ–ಕಟ್ಟೆ, ಬಾವಿ, ಹೊಟೇಲ್, ಶಾಲೆಗಳು,

ಸವರ್ಣೀಯರ ಬೀದಿ, ಮನೆಗಳಲ್ಲಿ ಪ್ರವೇಶ ನಿಷೇಧದ ಅಸ್ಪೃಶ್ಯತಾಚರಣೆ, ಜಾತಿಪದ್ಧತಿ, ಜೀತಗಾರಿಕೆ, ಮುಗ್ಧ ದಲಿತ ಹೆಣ್ಣು ಮಕ್ಕಳು ಹಾಗೂ ಹೆಂಗಸರುಗಳ ಮೇಲೆ ಅತ್ಯಾಚಾರ, ಲೈಂಗಿಕ ಕಿರುಕುಳ, ಮಾನಹರಣ, ಬೆತ್ತಲೆಸೇವೆ, ದೇವದಾಸಿ, ಬಸವಿ, ಓಕುಳಿಪದ್ಧತಿ, ದಲಿತರಿಗೆ ಮೂತ್ರಕುಡಿಸಿದ ಹಾಗೂ ಮಲ ತಿನ್ನಿಸಿದ ಪ್ರಕರಣಗಳು,ಹತ್ಯೆ ಪ್ರಕರಣಗಳು, ಕಗ್ಗೊಲೆಗಳು, ಸಜೀವ ದಹನ ಪ್ರಕರಣಗಳು,ಪ್ರಬಲ ಜಮೀನ್ದಾರರು, ಭೂಮಾಲೀಕರು, ಭೂಒಡೆಯರುಗಳ ದಬ್ಬಾಳಿಕೆಯಿಂದ ದಲಿತರ ಬಲವಂತ ದುಡಿಮೆ,ಅಕ್ರಮ ಭೂಆಕ್ರಮಣ, ವರ್ಗಸಂಘರ್ಷ, ಜಾತಿವೈಷಮ್ಯದ ಕೋಮುಘರ್ಷಣೆಗಳ ವಿರುದ್ಧ ಸಿಡಿಲಬ್ಬರದ ಚಳವಳಿಯನ್ನು ಕೈಗೊಂಡು ದಲಿತರನ್ನು ಇವುಗಳಿಂದ ಮುಕ್ತಿಗೊಳಿಸಲು ಪ್ರಯತ್ನಿಸುತ್ತಿದ್ದರು.ಜೊತೆಗೆ ದಲಿತೇತರ ಮೇಲೆ ಅದೇ ವರ್ಗದ ದರ್ಪಿಷ್ಟ ದಬ್ಬಾಳಿಕೆಗಾರರ ಶೋಷಣೆಗಳ ವಿರುದ್ಧವೂ ಕೂಡ 'ಜಾತ್ಯತೀತ' ಮನೋಭಾವದಿಂದ ಹೋರಾಟ ಮಾಡುತ್ತಿದ್ದರು.ನೆರೆಹೊರೆಯ ರಾಜ್ಯಗಳಲ್ಲಿ (ಕಿಲ್ವನ್ಮಣಿ, ಬೆಲ್ಚಿ, ಪಿಫ್ರಾ, ಕರಂಚೇಡು, ಚುಂಡೂರು, ಕೆಸ್ತಾರ, ದೇವ್ಲೋಲಿ, ರಾಯಪುರ, ಸಾಧುಪುರ, ಬಜಿತ್‌ಪುರ, ನಾಗಪಟ್ಟಣ, ಉದಯಪುರ, ಮುಜಾಫರ್‌ನಗರ ಇತ್ಯಾದಿ)ನ ದಲಿತ ಸಮುದಾಯಗಳ ಭೀಕರ ಹತ್ಯೆ, ನರಮೇಧ, ಹತ್ಯಾಕಾಂಡ, ಮಾರಣಹೋಮಗಳ ವಿರುದ್ಧ ಆಕ್ರೋಶಗೊಂಡು ತಮ್ಮ ರಕ್ತವನ್ನು ಬಾಟಲಿನಲ್ಲಿ ತುಂಬಿ ಕಳುಹಿಸುವ ಮೂಲಕ ದುರ್ಬಲ ಕೇಂದ್ರಸರ್ಕಾರ ಹಾಗೂ ಅಲ್ಲಿನ ರಾಜ್ಯಸರ್ಕಾರಗಳ ವಿರುದ್ಧ ಅಬ್ಬರಿಸಿದ್ದರು.[4]ಅಲ್ಲದೆ ತಮ್ಮ ಬೇಜವಾಬ್ದಾರಿ ಅರಾಜಕತೆಯ ಸರ್ಕಾರದ ಮುಖ್ಯಮಂತ್ರಿಗಳು, ಸಚಿವರು, ಶಾಸಕರುಗಳ ವಿರುದ್ಧ ಬಡವರ ಸಂಸಾರವನ್ನು ನಾಶಗೊಳಿಸುತ್ತಿದ್ದ ಹೆಂಡ, ಸಾರಾಯಿ ನಿಷೇಧ, ಎಲ್ಲಾ ಜಾತಿಗಳ ಬಡದಲಿತ ವಿದ್ಯಾರ್ಥಿಗಳಿಗೆ ವಸತಿ ಶಾಲೆ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಉತ್ತಮ ಶಿಕ್ಷಣವನ್ನು ಪಡೆಯಲು ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆಗಾಗಿ ಗೆರಾವು, ಮುಷ್ಕರ, ಪ್ರತಿಭಟನೆಗಳನ್ನು ಮಾಡುತ್ತಾ ಅವರಲ್ಲಿ ನಡುಕವನ್ನುಂಟು ಮಾಡಿದ್ದರು.[5]

ಇಂತಹವುಗಳನ್ನು ಬಹಳ ಎದೆಗಾರಿಕೆಯಿಂದ ನಿರ್ವಹಿಸಲು ಕ.ದ.ಸಂ.ಸ. ತನ್ನ ಸಂವಿಧಾನದ ಮಾರ್ಗಸೂಚಿಯಂತೆ ಚುನಾವಣೆಗಳ ಮೂಲಕ ಕಾರ್ಯನಿರ್ವಹಣೆಯ ಚತುರತೆಯನ್ನು ಹೊಂದಿದ್ದಂತಹ ಮುಂದಾಳುಗಳನ್ನು ರಾಜ್ಯ ಸಂಚಾಲಕರು, ರಾಜ್ಯ ಸಂಘಟನಾ ಸಂಚಾಲಕರು, ರಾಜ್ಯ ಖಜಾಂಚಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು.ಈ ಪ್ರಕ್ರಿಯೆಯ ನಿಯಮಜಿಲ್ಲೆ, ತಾಲ್ಲೂಕು, ಹೋಬಳಿ, ಗ್ರಾಮ ಶಾಖೆಗಳ ರಚನೆಗೂ ಅನ್ವಯಿಸಿತ್ತು.ಇದರಿಂದಾಗಿ ಕ.ದ.ಸಂ.ಸ.ದ ಪ್ರಧಾನ ಮುಂದಾಳುಗಳನ್ನು ಒಳಗೊಂಡಂತೆ ಹಲವಾರು ನಾಯಕರು ಮೇಲ್ಕಾಣಿಸಿದ ಸ್ಥಾನಗಳ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದರು.ಇದರ ಹಿನ್ನಲೆಯಲ್ಲಿರಾಜ್ಯಮಟ್ಟದ ಕ.ದ.ಸಂ.ಸ.ದ ಆಡಳಿತ ನಿರ್ವಹಣಾ ವಿಭಾಗದ ಕಾಲಾನುಕ್ರಮಣಿಕೆಯನ್ನು ಈ ಕೆಳಕಂಡಂತೆ ತಿಳಿದುಕೊಳ್ಳಬಹುದು.

1. ಬಿ.ಕೃಷ್ಣಪ್ಪ ಮತ್ತು ಎಂ.ಡಿ. ಗಂಗಯ್ಯ – ರಾಜ್ಯ ಸಂಚಾಲಕರು (1978–1984)[6]

2. ದೇವನೂರು ಮಹಾದೇವ (ಮೈಸೂರು) –ರಾಜ್ಯ ಸಂಚಾಲಕರು (1984–1986)

ಸಿ.ಎಂ. ಮುನಿಯಪ್ಪ (ಕೋಲಾರ) –ರಾಜ್ಯ ಸಂಘಟನಾ ಸಂಚಾಲಕ–1

ಎಂ.ಜಯಣ್ಣ – ರಾಜ್ಯ ಸಂಘಟನಾ ಸಂಚಾಲಕ–2

ರಂಗಸ್ವಾಮಿ ಬೆಲ್ಲದಮಡು (ತುಮಕೂರು)–ರಾಜ್ಯ ಖಜಾಂಚಿ

ಎನ್.ವೆಂಕಟೇಶ್ –ರಾಜ್ಯ ಕಾರ್ಯನಿರ್ವಾಹಕ[7]

3. ಸಿ.ಎಂ. ಮುನಿಯಪ್ಪ – ರಾಜ್ಯ ಸಂಚಾಲಕರು (1985–1987)

ಎಂ.ಜಯಣ್ಣ – ರಾಜ್ಯ ಸಂಘಟನಾ ಸಂಚಾಲಕರು

ರಂಗಸ್ವಾಮಿ ಬೆಲ್ಲದ ಮಡು – ರಾಜ್ಯ ಖಜಾಂಚಿ

ಎನ್.ವೆಂಕಟೇಶ್ – ರಾಜ್ಯ ಕಾರ್ಯನಿರ್ವಾಹಕ[8]

4. ಚಂದ್ರಪ್ರಸಾದ್ ತ್ಯಾಗಿ – ರಾಜ್ಯಸಂಚಾಲಕರು (1987–1990)

ಎಂ.ಡಿ. ಗಂಗಯ್ಯ – ರಾಜ್ಯ ಸಂಘಟನಾ ಸಂಚಾಲಕ – 1

ಎಸ್.ವೆಂಕಟೇಶ್ – ರಾಜ್ಯ ಸಂಘಟನಾ ಸಂಚಾಲಕ – 2

ಪಿ.ಶಂಭಯ್ಯ – ರಾಜ್ಯ ಖಜಾಂಚಿ[9]

5. ಎನ್. ಮುನಿಸ್ವಾಮಿ – ರಾಜ್ಯ ಸಂಚಾಲಕರು (1990–1993)

ದೇವನೂರು ಮಹಾದೇವ –ರಾಜ್ಯ ಸಂಘಟನಾ ಸಂಚಾಲಕರು, ಸಾಂಸ್ಕೃತಿಕ ವಿಭಾಗ

ಹರಿಹರ ಅನಂದಸ್ವಾಮಿ–ರಾಜ್ಯ ಸಂಘಟನಾ ನಾಯಕರು, ಆಂತರಿಕ ಶಿಸ್ತು ಮತ್ತು ಸಂಘಟನೆ

ಗುರುಪ್ರಸಾದ್ ಕೆರಗೋಡು – ರಾಜ್ಯ ಸಂಘಟನಾ ಸಂಚಾಲಕರು, ಪೌರಕಾರ್ಮಿಕ ವಿಭಾಗ ಮತ್ತು ಚರ್ಮಕಾರ್ಮಿಕ ವಿಭಾಗ.

ಡಿ.ಜಿ. ಸಾಗರ್ – ರಾಜ್ಯ ಸಂಘಟನಾ ಸಂಚಾಲಕರು, ದಲಿತ, ಹಿಂದುಳಿದ, ಅಲ್ಪಸಂಖ್ಯಾತ ವಿಭಾಗ

ಕೆ.ಎಸ್.ನಾರಾಯಣಸ್ವಾಮಿ –ರಾಜ್ಯ ಸಂಘಟನಾ ಸಂಚಾಲಕರು, ಅಂತರರಾಜ್ಯ ವಿಭಾಗ

ಆನಂದಭಂಡಾರಿ – ರಾಜ್ಯ ಖಜಾಂಚಿ[10]

6. ಡಿ.ಜಿ.ಸಾಗರ್ – ರಾಜ್ಯ ಸಂಚಾಲಕರು(1994–1997)

ಗುರುಪ್ರಸಾದ್ ಕೆರಗೋಡು – ರಾಜ್ಯ ಸಂಘಟನಾ ಸಂಚಾಲಕರು –1

| | | |
|---|---|---|
| ಮಾವಳ್ಳಿ ಶಂಕರ್ | – | ರಾಜ್ಯ ಸಂಘಟನಾ ಸಂಚಾಲಕರು –2 |
| ಎಂ.ಶಿವಣ್ಣ | – | ರಾಜ್ಯ ಸಂಘಟನಾ ಸಂಚಾಲಕರು–3 |
| ಎನ್.ವೆಂಕಟೇಶ | – | ರಾಜ್ಯ ಸಂಘಟನಾ ಸಂಚಾಲಕರು –4 |
| ಎಂ.ವಿರೂಪಾಕ್ಷ | – | ರಾಜ್ಯ ಖಜಾಂಚಿ[11] |

ಪ್ರಮುಖವಾದವರು.ಹೀಗೆ ಇರುವೆ ಸಾಲಿನಂತೆಒಗ್ಗಟ್ಟಿನಿಂದ ಶಿಸ್ತುಬದ್ಧವಾಗಿಸಾಗುತ್ತಿದ್ದ ಕ.ದ.ಸಂ.ಸ.ದಲ್ಲೂ ಕೂಡಬ್ಲಾಕ್ ಪ್ಯಾಂಥರ್ಸ್, ದಲಿತ್ ಪ್ಯಾಂಥರ್ಸ್, ಸಮಾಜವಾದಿ ಯುವಜನ ಸಭಾಗಳಲ್ಲಾದಂತೆ ಇದ್ದಕ್ಕಿದ್ದ ಹಾಗೆ ಆಂತರಿಕ ಭಿನ್ನಾಭಿಪ್ರಾಯಗಳ ಬಿಕ್ಕಟ್ಟು ಭುಗಿಲೆದ್ದು ಹೆಮ್ಮಾರಿಯಂತೆಆಕ್ರಮಣ ಮಾಡಿತು.ಅವುಗಳನ್ನು ಈ ಕೆಳಗಿನಂತೆ ತಿಳಿದುಕೊಳ್ಳಬಹುದು.

- ಸೈದ್ಧಾಂತಿಕವಾಗಿ ಟಿಸಿಲೊಡೆದ ವಾದವಿವಾದಗಳ ಅಸಮಾಧಾನದ ಹೊಗೆ.
- ರಾಜಕೀಯ ಪ್ರವೇಶದ ಪ್ರಬುದ್ಧರಹಿತ ದುಡುಕಿನ ತೀರ್ಮಾನ.
- ಸಂಘಟನೆಯ ಹಣಕಾಸು ನಿರ್ವಹಣೆಯಲ್ಲಿ ಭ್ರಷ್ಟತೆ.
- ಬಹುಜನ ಸಮಾಜ ಪಕ್ಷ (ಬಿ.ಎಸ್.ಪಿ) ಕ್ಕೆ ನೀಡಿದ್ದ ಬೆಂಬಲದಲ್ಲಿ ಅತೃಪ್ತಿ.
- ಎಡಗೈ–ಬಲಗೈ ಉಪಜಾತಿಗಳಪ್ರವೇಶ.
- ಕ.ದ.ಸಂ.ಸ.ದ ಕಾರ್ಯಕ್ರಮಗಳ ಸಮಯ ಪಾಲನೆಯಲ್ಲಿ ಅಶಿಸ್ತು.

ಮುಂತಾದವುಗಳು ಪ್ರಮುಖವಾದವುಗಳು.ಇವುಗಳೇ ಪ್ರಧಾನ ಕಾರಣಗಳಾಗಿಕ.ದ.ಸಂ.ಸ.ದ ಹಂತಹಂತದ ವಿಘಟನೆಗೆ ನಾಂದಿಯಾಡಿತು.[12]

- **ಕ.ದ.ಸಂ.ಸ.ದ ವಿಘಟನೆಯ ಹಂತಗಳು:**

ಕ.ದ.ಸಂ.ಸ.ದ ವಿಘಟನೆಯ ಹಂತಗಳನ್ನು ಈ ಕೆಳಕಂಡ ಸವಿವರವಾದ ವಿವರಣೆಯ ಮೂಲಕ ತಿಳಿದುಕೊಳ್ಳಬಹುದು.

1. **ಸೈದ್ಧಾಂತಿಕವಾಗಿ ಟಿಸಿಲೊಡೆದ ವಾದವಿವಾದಗಳ ಅಸಮಾಧಾನದ ಹೊಗೆ:**

ಕ.ದ.ಸಂ.ಸ.ದ ಮುಂದಾಳುಗಳಾಗಿದ್ದ ಬಿ.ಕೃಷ್ಣಪ್ಪನವರು 'ಅಂಬೇಡ್ಕರ್‌ವಾದ'ವನ್ನು, ದೇವನೂರು ಮಹಾದೇವರವರು 'ಸಮಾಜವಾದ'ವನ್ನು, ಸಿದ್ಧಲಿಂಗಯ್ಯರವರು 'ಮಾರ್ಕ್ಸ್‌ವಾದಿ ಚಿಂತನೆ'ಗಳನ್ನು ಪ್ರತಿಪಾದಿಸುತ್ತಿದ್ದರಿಂದ ಅವರವರಲ್ಲೆ ವಾದಗಳ ಬಗ್ಗೆ ಭಿನ್ನಾಭಿಪ್ರಾಯಗಳಿದ್ದವು.ಹೀಗಿದ್ದರೂ ಅವರ ನಡುವಿನ ಸಹೋದರ ಬಾಂಧವ್ಯಗಳಿಗೆ ಕೊರತೆಯಿರಲಿಲ್ಲ.[13] ಆದರೆ ಸಂಘಟನೆಯ ನಾಯಕತ್ವ, ನಿರ್ಧಾರ, ನಿರ್ಣಯಗಳಿಗೆ ಸಂಬಂಧಿಸಿದಂತೆ ಇವರಲ್ಲಿ ವೈಯುಕ್ತಿಕ ಭಿನ್ನಾಭಿಪ್ರಾಯಗಳು ಮೊಳಕೆ ಹೊಡೆ

ದಿದ್ದವು.ಒಬ್ಬರು ಮತ್ತೊಬ್ಬರ ತೀರ್ಮಾನಗಳನ್ನು ಸರಿಯಾದ ರೀತಿಯಲ್ಲಿ ಸಮ್ಮತಿಸುತ್ತಿರಲಿಲ್ಲ. ಇದಕ್ಕೆ 'ಗಾಂಧಿಸಿನಿಮಾ ಬಹಿಷ್ಕಾರ'ದ ಉದಾಹರಣೆಯನ್ನು ನೀಡಬಹುದು.

1982 ರ ಸಮಯದಲ್ಲಿ ಆಟೆನ್‌ಬರೊನ ಎಂಬ ಸಿನಿಮಾ ನಿರ್ದೇಶಕನಿಂದ ಗಾಂಧೀಜಿಯವರ ಜೀವನ ಸಾಧನೆಗಳನ್ನು ಕುರಿತಾದ ಸಿನಿಮಾವೊಂದು ಭಾರತದಾದ್ಯಂತ ಬಿಡುಗಡೆಯಾಗಿತ್ತು.ಇದು ಕರ್ನಾಟಕದಲ್ಲೂ ಕೂಡ ಪ್ರದರ್ಶಿತವಾಗುತ್ತಿತ್ತು.ಈ ಸಿನಿಮಾದಲ್ಲಿ ಗಾಂಧೀಜಿ ವ್ಯಕ್ತಿತ್ವವನ್ನು ಮಾತ್ರ ಪ್ರತಿಬಿಂಬಿಸಿ ಜವಹರಲಾಲ್ ನೆಹರು, ವಲ್ಲಭಬಾಯಿ ಪಟೇಲ್, ಮಹಮದ್ ಅಲಿ ಜಿನ್ನಾ, ಇಂದಿರಾಗಾಂಧಿಯವರ ಸ್ಥಾನಮಾನವನ್ನು ಮೂಲೆಗೆ ತಳ್ಳಿದ್ದರು.ಜೊತೆಗೆ ಬಿ.ಆರ್.ಅಂಬೇಡ್ಕರ್‌ರವರ ಪಾತ್ರಕ್ಕೆ ಇದರಲ್ಲಿ ಸ್ಥಾನ ನೀಡಿರಲಿಲ್ಲ.[14]ಹೀಗೆ ಆರೋಪ ಮಾಡಿ ಕ.ದ.ಸಂ.ಸ. ಈ ಸಿನಿಮಾವನ್ನು ಕರ್ನಾಟಕದಿಂದ ಬಹಿಷ್ಕರಿಸಲು ತುಮಕೂರಿನಲ್ಲಿ ಸಭೆ ಸೇರಿತು.ಆ ಸಭೆಯಲ್ಲಿ ಬಿ.ಕೃಷ್ಣಪ್ಪರವರು ತಮ್ಮ ಅಂಬೇಡ್ಕರ್‌ವಾದವನ್ನು ಮಂಡಿಸಿ ಈ ಚಲನಚಿತ್ರವನ್ನು ಬಹಿಷ್ಕರಿಸಲೇಬೇಕೆಂದು ಪಟ್ಟುಹಿಡಿದರು.ಆದರೆ ದೇವನೂರು ಮಹಾದೇವ, ಹೆಚ್.ಗೋವಿಂದಯ್ಯ, ರಾಮದೇವ ರಾಕೆ, ಕೆ.ಬಿ. ಸಿದ್ದಯ್ಯರವರು ಬಿ.ಕೃಷ್ಣಪ್ಪರವರ ನಿರ್ಧಾರಕ್ಕೆ ಒಪ್ಪಿಗೆ ನೀಡಲು ಮುಂದಾಗಲಿಲ್ಲ. ಏಕೆಂದರೆ ಈ ಸಿನಿಮಾವನ್ನು ನೋಡಿ ಪರಾಮರ್ಶಿಸಿ, ಒಂದು ವೇಳೆ ಅದರಲ್ಲಿ ಅಂಬೇಡ್ಕರ್ ಕುರಿತಾದ ನ್ಯೂನತೆಗಳಿದ್ದರೆ ಅದನ್ನು ಚರ್ಚಿಸಿ ನಂತರ ಗಾಂಧಿಸಿನಿಮಾವನ್ನು ಬಹಿಷ್ಕರಿಸಬೇಕೋ! ಬೇಡವೋ! ಎಂಬ ತೀರ್ಮಾನ ತೆಗೆದುಕೊಳ್ಳುವುದು ಸರಿಯಾದುದೆಂಬ ನಿಲುವು ಅವರದಾಗಿತ್ತು.[15] ಆದರೆ ದೇವನೂರು ಮಹಾದೇವ, ಹೆಚ್.ಗೋವಿಂದಯ್ಯರವರು ಈ ಸಿನಿಮಾವನ್ನು ನೋಡಿ ಬಹಿರಂಗವಾಗಿ ಪಂಚಮ ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದರು.[16] ಇದು ಬಿ.ಕೃಷ್ಣಪ್ಪರವರ ಗಾಂಧಿ ಸಿನಿಮಾ ಬಹಿಷ್ಕಾರದ ತೀರ್ಮಾನಕ್ಕೆ ಅವಮಾನ ಮಾಡಿದಂತಾಗಿ ಇವರುಗಳ ನಡುವೆ ಸೈದ್ಧಾಂತಿಕ ನಿರ್ಣಯಗಳಿಗೆ ಸಂಬಂಧಿಸಿದಂತೆ ಅಸಮಾಧಾನದ ದ್ವಂದ್ವ ಉಂಟಾಗಲು ಪ್ರಮುಖ ಕಾರಣವಾಯಿತು.

2. **ರಾಜಕೀಯ ಪ್ರವೇಶದ ಪ್ರಬುದ್ಧರಹಿತ ದುಡುಕಿನ ತೀರ್ಮಾನ:**

ಕ.ದ.ಸಂ.ಸ.ವು ದಲಿತ ಪ್ಯಾಂಥರ್ಸ್‌ನಂತೆ ಚುನಾವಣೆಯನ್ನು ಬಹಿಷ್ಕರಿಸಿ ರಾಜಕಾರಣಿಗಳು ಅಧಿಕಾರಕ್ಕಾಗಿ ಮಾಡುತ್ತಿದ್ದ ಭ್ರಷ್ಟಾಚಾರ, ಮೋಸ, ವಂಚನೆಗಳನ್ನು ಖಂಡಿಸಿ 'ಓಟು ಕೇಳೋ ಕಾರು ಬಂತಣ್ಣಾ, ಮೆಟ್ಟು ತೆಗೆದು ಅದರ ಮೂತಿಗೊಡೆಯಣ್ಣಾ', 'ಮತದಾನವನ್ನು ತಡೆಯುತ್ತೇವೆ, ರಕ್ತವನ್ನು ಚೆಲ್ಲುತ್ತೇವೆ' ಎಂಬ ಘೋಷಣೆಯ ಮೂಲಕ ಚುನಾವಣೆಯನ್ನು ಬಹಿಷ್ಕರಿಸಿತ್ತು.ಅಲ್ಲದೆ ಇದೇ ಸಮಯದಲ್ಲಿ ಭಾರತದ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರು 'ತುರ್ತುಪರಿಸ್ಥಿತಿ'ಯನ್ನು ಘೋಷಿಸಿದ್ದನ್ನು ವಿರೋಧಿಸುವ ಸಲುವಾಗಿ ಕಾಂಗ್ರೆಸ್ ವಿರುದ್ಧ ಕ.ದ.ಸಂ.ಸ. ಮತದಾನದ ಬಹಿಷ್ಕಾರವನ್ನು ಮಾಡಿತ್ತು.ಆದರೆ ಕೆಲವು ದಲಿತ ಬುದ್ಧಿಜೀವಿಗಳು 1983 ರಲ್ಲಿ ತುಮಕೂರಿನಲ್ಲಿ ನಡೆದ ರಾಜ್ಯಸಮಿತಿಯ ಸಭೆಯಲ್ಲಿ 'ಮತದಾನ

ಮಾಡುವುದು ನಮ್ಮೆಲ್ಲರ ಸಂವಿಧಾನಾತ್ಮಕ ಹಕ್ಕು ನಾವು ಅದನ್ನು ಬಹಿಷ್ಕರಿಸಿದರೆ ಪ್ರಜಾಪ್ರಭುತ್ವಕ್ಕೆ ಅಪಮಾನ ಮಾಡಿದಂತಾಗುತ್ತದೆ. ಆದ್ದರಿಂದ ನಾವು ಕಾಂಗ್ರೆಸ್ ಪಕ್ಷದ ದುರಾಡಳಿತವನ್ನು ಅಂತ್ಯಗೊಳಿಸಲು ಬೇರೆ ಯಾವುದಾದರೂ ಕಾಂಗ್ರೆಸೇತರ ಪಕ್ಷವನ್ನು ಬೆಂಬಲಿಸಿ ಮತದಾನ ಮಾಡೋಣ' ಎಂದು ಎಲ್ಲರೂ ತೀರ್ಮಾನಿಸಿದರು.[17]

ಜನತಾಪಕ್ಷದ ರಾಮಕೃಷ್ಣ ಹೆಗಡೆಯವರುಕ.ದ.ಸಂ.ಸ.ದ ನಾಯಕರಿಗೆ ತಮ್ಮ ಜೊತೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳುವ ಅವಕಾಶ ನೀಡಿ ತಮಗೆ ಚುನಾವಣೆಯಲ್ಲಿ ಬೆಂಬಲಿಸಬೇಕೆಂದು ಕೇಳಿಕೊಂಡರು. ಆಗ ಕ.ದ.ಸಂ.ಸ.ದ ನಾಯಕರಿಗೆ ಜನತಾಪಕ್ಷದೊಡನೆ ಸ್ಥಾನ ಹೊಂದಾಣಿಕೆ ಮಾಡಿಕೊಂಡು ಚಾಕಚಕ್ಯತೆಯ ರಾಜಕೀಯ ಮಾಡುವ ಸಾಮರ್ಥ್ಯ ಕಡಿಮೆಯಿದ್ದುದರಿಂದ ಅವರು ಕೇವಲ ತಮಗೆ ಬೆಂಬಲವಾಗಿ ನಿಲ್ಲುತ್ತೇವೆ ಎಂದು ಭರವಸೆ ನೀಡಿ ಬಿ.ಕೃಷ್ಣಪ್ಪ, ದೇವನೂರು ಮಹಾದೇವರರಾದಿಯಾಗಿ 1983ರ ಚುನಾವಣೆಯಲ್ಲಿ ಜನತಾಪಕ್ಷಕ್ಕೆ ಬೆಂಬಲಿಸಿ ಅದು ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದರು.ಇದರಿಂದಾಗಿ ಮುಖ್ಯಮಂತ್ರಿ ಪದವಿಗೇರಿದ ರಾಮಕೃಷ್ಣ ಹೆಗಡೆಯವರು ಕ.ದ.ಸಂ.ಸ.ದ ಮುಂದಾಳುಗಳಿಗೆ ಆಸ್ತಿ, ಹಣ, ನಿಗಮ, ಮಂಡಳಿಗಳ ಮುಖ್ಯಸ್ಥತನದ ಆಮಿಷವನ್ನು ತೋರಿಸಿ ತಮ್ಮ ಅಧಿಕಾರದ ಯಮಪಾಶದಲ್ಲಿ ಬಂಧಿಸಿದರು.ಉದಾಹರಣೆಗೆ ದೇವನೂರು ಮಹಾದೇವರವರ ಸಹೋದರರಾದ ದೇವನೂರು ಶಿವಮಲ್ಲರವರಿಗೆ ಬಿ.ಕೃಷ್ಣಪ್ಪರವರಿಗೆ ಬದಲಾಗಿ 'ವಯಸ್ಕರ ಶಿಕ್ಷಣ ಮಂಡಳಿ'ಯ ಅಧ್ಯಕ್ಷ ಸ್ಥಾನ ನೀಡಿದ್ದು ಪ್ರಮುಖವಾದದ್ದು.[18] ಮುಂದೆ ಕ.ದ.ಸಂ.ಸ.ದ ನಾಯಕರು ಅಧಿಕಾರಿಗಳನ್ನು ವರ್ಗಾವಣೆ ಮಾಡಿಸುವ, ಸರ್ಕಾರಿ ಹುದ್ದೆಗಳನ್ನು ಕೊಡಿಸುವ ಭ್ರಷ್ಟ ದಲ್ಲಾಳಿಗಳಾಗಿ ಜನತಾಪಕ್ಷದ ಜೊತೆ ಗುರುತಿಸಿಕೊಂಡರು.ಇದನ್ನು ದಿನನಿತ್ಯ ಗಮನಿಸುತ್ತಿದ್ದ ಕಾರ್ಯಕರ್ತರು, ಪದಾಧಿಕಾರಿಗಳಲ್ಲಿ ಕ.ದ.ಸಂ.ಸ.ದ ಇವರ ಮೇಲೆ ಅಸಮಾದಾನದ ಹೊಗೆ ಆವರಿಸಿತ್ತು.[19] ಈ ಅಸಮಾಧಾನವೇ ಹಣ ದುರುಪಯೋಗದ ರೂಪದಲ್ಲಿ ಕ.ದ.ಸಂ.ಸ.ದ ಮೊದಲ ಬಿರುಕಿಗೆ ಮುಖ್ಯ ಕಾರಣವಾಯಿತು ಎಂದು ಹೇಳಬಹುದು.

**೩. ಸಂಘಟನೆಯ ಹಣಕಾಸು ನಿರ್ವಹಣೆಯಲ್ಲಿ ಭ್ರಷ್ಟತೆ:**

14 ಏಪ್ರಿಲ್, 1985 ರಂದು 'ಅಂಬೇಡ್ಕರ್ ಜನ್ಮ ದಿನೋತ್ಸವ'ವನ್ನು ಬಹಳ ವಿಜೃಂಭಣೆಯಿಂದ ಆಚರಿಸಬೇಕೆಂದು ದೇವನೂರು ಮಹಾದೇವರ ಸಂಚಾಲಕತ್ವದ ಕ.ದ.ಸಂ.ಸ. ರಾಜ್ಯಸಮಿತಿ ಬೆಂಗಳೂರಿನಲ್ಲಿ ಸಭೆ ಸೇರಿ ನಿರ್ಧರಿಸಿತು.ಇದರ ಕಾರ್ಯಭಾರವನ್ನು ದೇವನೂರು ಮಹಾದೇವರೊಬ್ಬರಿಗೆ ವಹಿಸಿಕೊಳ್ಳಲು ಕಷ್ಟಸಾಧ್ಯವಾಗಿದ್ದರಿಂದ ಇದರ ಜವಾಬ್ದಾರಿಯನ್ನು ಬೆಂಗಳೂರು ಜಿಲ್ಲೆಯ ಕ.ದ.ಸಂ.ಸ.ದ ಜಿಲ್ಲಾ ಸಂಚಾಲಕರಾಗಿದ್ದ ಎಂ.ವೆಂಕಟಸ್ವಾಮಿ (ಕೋಲಾರ)ಯವರಿಗೆ ವಹಿಸಿಕೊಡಲಾಗಿತ್ತು.ಅಲ್ಲದೇಇದರ

ಹಣಕಾಸು ನಿರ್ವಹಣೆಯ ಜವಾಬ್ದಾರಿಯನ್ನು ಅವರೇ ವಹಿಸಿಕೊಂಡರು.ಇದರ ಆಚರಣೆಗಾಗಿ ಇವರು ಎಲ್ಲಾ ದಲಿತ ಅಧಿಕಾರಿಗಳು, ರಾಜಕಾರಣಿಗಳು, ಕಾರ್ಯಕರ್ತರುಗಳಿಂದ ಹಣವನ್ನು ಸಂಗ್ರಹಿಸಿದ್ದರಿಂದ ಅಂಬೇಡ್ಕರ್ ಜಯಂತಿಯನ್ನು 'ದಲಿತರ ಸ್ವಾಭಿಮಾನದ ದಿನ'ವನ್ನಾಗಿ ಬಹಳ ಅದ್ಭುತವಾಗಿ ಆಚರಿಸಲಾಯಿತು. ಯಾವುದೇ ಕಾರ್ಯಕ್ರಮಗಳು ಮುಗಿದ ಮೇಲೆ ಕ.ದ.ಸಂ.ಸ. ಸಂವಿಧಾನದ ನಿಯಮಗಳಂತೆ ಹಣಕಾಸು ವ್ಯವಹಾರದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದವರು ಅದಕ್ಕೆ ಸಂಗ್ರಹಿಸಿದ ಹಣ ಮತ್ತು ಆದ ಖರ್ಚು ವೆಚ್ಚಗಳನ್ನು ಪಟ್ಟಿ ಮಾಡಿ ವರದಿಮಾಡುವುದು ಕಡ್ಡಾಯವಾಗಿತ್ತು.[20]

ಎಂ.ವೆಂಕಟಸ್ವಾಮಿಯವರು ಈ ಕಾರ್ಯಕ್ರಮಕ್ಕಾಗಿ ಸಂಗ್ರಹಿಸಿದ ಹಣ, ಮಾಡಿದ ಖರ್ಚುವೆಚ್ಚಗಳಿಗೆ ಸಂಬಂಧಿಸಿದ ಲೆಕ್ಕವನ್ನು ಬೆಂಗಳೂರಿನಲ್ಲಿ ನಡೆದ ರಾಜ್ಯಸಮಿತಿಯ ಸಭೆಯಲ್ಲಿ ಸಲ್ಲಿಸಿದರು.ಈ ಸಂದರ್ಭದಲ್ಲಿ ಇವರಿಂದ ಸುಮಾರು ೮೦೦೦/- ರೂಪಾಯಿಗಳು ಹಣ ದುರುಪಯೋಗವಾಗಿರುವುದು ಸಮಿತಿಗೆ ತಿಳಿಯಿತು.ಇದನ್ನು ವೆಂಕಟಸ್ವಾಮಿಯವರೂ ಕೂಡ ಒಪ್ಪಿಕೊಂಡಿದ್ದರು.ಇದರ ಕೂಲಂಕಷ ತನಿಖೆಗಾಗಿ ತುಮಕೂರಿನ ರಂಗಸ್ವಾಮಿ ಬೆಲ್ಲದಮಡು ನೇತೃತ್ವದ ಪರಿಶೀಲನಾ ಆಯೋಗವನ್ನು ಕ.ದ.ಸಂ.ಸ.ದ ರಾಜ್ಯ ಸಮಿತಿ ನೇಮಿಸಿತು.ಈ ತನಿಖಾ ಸಮಿತಿ ವೆಂಕಟಸ್ವಾಮಿಯವರು ಮಾಡಿಕೊಂಡಿದ್ದ ಹಣ ದುರುಪಯೋಗದ ಬಗ್ಗೆ ಕೂಲಂಕಷವಾದ ಪರಿಶೋಧನೆ ನಡೆಸಿ ತನ್ನ ವರದಿಯನ್ನು 6 ಜುಲೈ, 1986 ರಲ್ಲಿ ತುಮಕೂರಿನಲ್ಲಿ ನಡೆದ ಕ.ದ.ಸಂ.ಸ.ರಾಜ್ಯ ಸಮಿತಿಯ ಸಭೆಯಲ್ಲಿ ಮಂಡಿಸಿತು.ಇದರಿಂದ ವೆಂಕಟಸ್ವಾಮಿಯವರಿಂದ ಹಣ ದುರುಪಯೋಗವಾಗಿರುವುದು ಸಾಬೀತಾಯಿತು.ಆದರೆ ವೆಂಕಟಸ್ವಾಮಿಯವರು ತಾವು ಒಪ್ಪಿಕೊಂಡಿದ್ದ ತಪ್ಪನ್ನು ಗಾಳಿಗೆ ತೂರಿ ಬೆಂಗಳೂರಿನಲ್ಲಿ ರಾಜ್ಯಸಮಿತಿಯ ಕಛೇರಿಯನ್ನು ತೆರೆಯಲು ಕ.ದ.ಸಂ.ಸ. ಕೂಡಿಸಿಟ್ಟಿದ್ದ 10000/- ರೂಪಾಯಿಗಳನ್ನು ಸ್ವಂತಕ್ಕೆ ಬಳಸಿಕೊಂಡು ಉದ್ದೇಶಪೂರ್ವಕವಾಗಿ ಕಛೇರಿಯನ್ನು ಮುಚ್ಚಿಸಿದ್ದರು.ಇದಕ್ಕಾಗಿ 22 ಡಿಸೆಂಬರ್, 1986ರಂದು ಎರಡು ದಿನಗಳ ಗಡುವಿನೊಂದಿಗೆ ಇವರಿಗೆ ಷೋಕಾಸ್ ನೋಟಿಸ್‌ನ್ನು ನೀಡಲಾಗಿತ್ತು. ಈ ನೋಟಿಸಿಗೆ 5 ಜನವರಿ, 1987 ರ ಸೋಮವಾರದವರೆವಿಗೂ ಅವರಿಂದ ಯಾವುದೇ ಪ್ರತ್ಯುತ್ತರ ಬರದಿದ್ದರಿಂದ ಕ.ದ.ಸಂ.ಸ. ಸಂವಿಧಾನದ ಅನುಚ್ಛೇದ 14(ಅ) ಕಲಂ ಪ್ರಕಾರ ಅವರನ್ನು ಕ.ದ.ಸಂ.ಸ.ದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಛಾಟಿಸಲಾಯಿತು.[21]ನಂತರ ವೆಂಕಟಸ್ವಾಮಿಯವರು ಮೇ 1991ರ ವೇಳೆಗೆ ಅಂಬೇಡ್ಕರ್‌ರವರು ಅವರ ಕಾಲದಲ್ಲಿ ಕಟ್ಟಿದ್ದ 'ಸಮತಾ ಸೈನಿಕ ದಳ' (ಎಸ್.ಎಸ್.ಡಿ) ದ ಶಾಖೆಯನ್ನು ಸ್ಥಾಪಿಸಿಕೊಂಡು ಕ.ದ.ಸಂ.ಸ.ಕ್ಕೆ ಪ್ರತಿಸ್ಪರ್ಧಿಯಾಗಿ ಕಾರ್ಯನಿರ್ವಹಿಸುತ್ತಾ, ಇವತ್ತಿಗೂ ಅದರ ರಾಜ್ಯಾಧ್ಯಕ್ಷರಾಗಿ ಮುಂದುವರಿದಿದ್ದಾರೆ.[22] ಈ ರೀತಿಯಲ್ಲಿ ಕ.ದ.ಸಂ.ಸ.ದ ಮೊದಲ ಬಿರುಕು ಉಂಟಾಯಿತು.

ಇದರ ಮೂಲಕ ಕ.ದ.ಸಂ.ಸ.ದ ವಿಘಟನೆಯು ಕೂಡ ಆರಂಭವಾಯಿತು.ಏಕೆಂದರೆ ಕ.ದ.ಸಂ.ಸ.ವು ಎಂ.ಡಿ.ನಂಜುಂಡಸ್ವಾಮಿಯವರನೇತೃತ್ವದ ರಾಜ್ಯ ರೈತಸಂಘ ಹಾಗೂ ಪಿ.ಲಂಕೇಶ್‌ರವರನೇತೃತ್ವದ ಪ್ರಗತಿರಂಗದ ಜೊತೆ ರಾಜಕೀಯ ಮೈತ್ರಿ ಮಾಡಿಕೊಂಡು ಚುನಾವಣೆಗಳಲ್ಲಿ ಸ್ಪರ್ಧಿಸಲು 'ರಾಜಕೀಯದ ತೃತೀಯ ರಂಗ'ದ ರಚನೆಗೆ ಮುಂದಾಗಿ ವಿಫಲವಾಗಿತ್ತು. ಹೀಗಾಗಿ ಮುಂದೆಉತ್ತರಭಾರತದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಂಬೇಡ್ಕರ್‌ರವರ ರಾಜಕೀಯ ಸಿದ್ಧಾಂತಾಧರಿತ 'ಬಹುಜನ ಸಮಾಜ ಪಕ್ಷ'ಕ್ಕೆ ಬೆಂಬಲ ನೀಡಲು ಮುಂದಾದರು.

4. **ಬಹುಜನ ಸಮಾಜ ಪಕ್ಷ (ಬಿ.ಎಸ್.ಪಿ) ಕ್ಕೆ ನೀಡಿದ್ದ ಬೆಂಬಲದಲ್ಲಿ ಅತೃಪ್ತಿ:**

ಚಂದ್ರಪ್ರಸಾದ್ ತ್ಯಾಗಿಯವರ ರಾಜ್ಯ ಸಂಚಾಲಕತ್ವದ ಮೂರು ವರ್ಷದ ಅವಧಿ ಮುಕ್ತಾಯಗೊಂಡಿತ್ತು.ಇವರ ನಂತರ ಎನ್.ಮುನಿಸ್ವಾಮಿಯವರು (1990–1993) ಕ.ದ.ಸಂ.ಸ.ದ ರಾಜ್ಯ ಸಂಚಾಲಕರಾದರು. ಈ ಸಮಯದಲ್ಲಿ ಉತ್ತರಪ್ರದೇಶದಲ್ಲಿ ಕಾನ್ಷಿರಾಂ ಎಂಬುವವರು ಅಂಬೇಡ್ಕರ್‌ರವರ ರಾಜಕೀಯ ಸಿದ್ದಾಂತಗಳಿಂದ ಪ್ರಭಾವಿತರಾಗಿ 'ಬಹುಜನ ಸಮಾಜ ಪಕ್ಷ' (ಬಿಎಸ್‌ಪಿ) ಎಂಬ ರಾಜಕೀಯ ಪಕ್ಷವನ್ನು ಸ್ಥಾಪಿಸಿ ಅದನ್ನು ರಾಜ್ಯವಾಳುವ ಹಂತಕ್ಕೆ ಕೊಂಡೊಯ್ದಿದ್ದರು.[23]ಈ ವಿಷಯ ಅಂಬೇಡ್ಕರ್ ರಾಜಕೀಯ ಸಿದ್ಧಾಂತಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದ ಕ.ದ.ಸಂ.ಸ.ದ ಸಮಾಜವಾದಿ, ಮಾರ್ಕ್ಸ್‌ವಾದಿಗಳಿಗೆ ತಿಳಿಯಿತು. ಆಗ ಕೋಟಗಾನಹಳ್ಳಿ ರಾಮಯ್ಯರವರು 'ದಲಿತ ಸಂಘರ್ಷಸಮಿತಿಯನ್ನು ಒಂದು ಸಾಂಸ್ಕೃತಿಕ ರಾಜಕೀಯೇತರ ಸಂಘಟನೆಯನ್ನಾಗಿ ಉಳಿಸಿಕೊಂಡು ರಾಜಕೀಯ ಮಾಡಬಹುದಲ್ಲ' ಎಂಬುದಾಗಿ ನೀಡಿದ ಸಲಹೆಯಂತೆ ಬಿ.ಕೃಷ್ಣಪ್ಪ, ದೇವನೂರು ಮಹಾದೇವ, ಸಿ.ಕೆ.ಮಹೇಶ್, ಶ್ರೀಧರ್ ಕಲಿವೀರ್, ಕೆ.ನಾರಾಯಣಸ್ವಾಮಿ, ರುದ್ರಸ್ವಾಮಿ ಮುಂತಾದವರು ಒಟ್ಟಾಗಿ ಬಿ.ಎಸ್.ಪಿ.ಯನ್ನು ತಮ್ಮ ರಾಜಕೀಯ ಪಕ್ಷವನ್ನಾಗಿ ಆಯ್ಕೆ ಮಾಡಿಕೊಳ್ಳಲು ತೀರ್ಮಾನಿಸಿದರು.[24] ಆದರೆ ಕ.ದ.ಸಂ.ಸ.ದ ಕೆಲವರು ಕೆ.ರಾಮಯ್ಯರವರ ಸಲಹೆಯನ್ನು ತಿರಸ್ಕರಿಸಿ ಕ.ದ.ಸಂ.ಸ.ದೊಳಗೆ ಇದ್ದುಕೊಂಡೇ ಬಿ.ಎಸ್.ಪಿ.ಯನ್ನು ಒಪ್ಪಿಕೊಂಡರು.ಇದನ್ನು ದೇವನೂರು ಮಹಾದೇವರವರು ವಿರೋಧಿಸಿದರು.[25] ಇಲ್ಲಿಂದ ಕೆ.ರಾಮಯ್ಯ ಕ.ದ.ಸಂ.ಸ. ಸಂಬಂಧವನ್ನು ಕಡಿದುಕೊಂಡರು.[26]ಇದೇ ಸಂದರ್ಭದಲ್ಲಿ ಬಿ.ಕೃಷ್ಣಪ್ಪ ಹಾಗೂ ದೇವನೂರು ಮಹಾದೇವರವರ ನಡುವೆ ಪ್ರತ್ಯೇಕ ಗುಂಪು ಸೃಷ್ಟಿಯಾಗಿತ್ತು.

ಇಂತಹ ವಿದ್ಯಮಾನಗಳು ಘಟಿಸಿದ ನಂತರ ಕ.ದ.ಸಂ.ಸ.ದ ನಾಯಕರಾದ ಬಿ.ಕೃಷ್ಣಪ್ಪರವರ ಗುಂಪು ಕಾನ್ಷಿರಾಂ ಜೊತೆಗೆ ಸಂಪರ್ಕವನ್ನು ಇಟ್ಟುಕೊಂಡರು.ಇದರಿಂದಾಗಿ ಬಿ.ಕೃಷ್ಣಪ್ಪನವರು ಬಿ.ಎಸ್.ಪಿ.ಯ ರಾಜ್ಯ ಪ್ರಧಾನ ಕಾರ್ಯದರ್ಶಿಯಾದರು.[27]ಮುಂದೆ 1994ರ ಸಮಯದಲ್ಲಿ ರಾಜ್ಯ ವಿಧಾನಸಭಾ ಚುನಾವಣೆ ಘೋಷಣೆಯಾಯಿತು.ಈ ಸಮಯದಲ್ಲಿ ಕ.ದ.ಸಂ.ಸ.ದ ರಾಜ್ಯ ಸಂಚಾಲಕರಾಗಿ

ಡಿ.ಜಿ.ಸಾಗರ್ ಎಂಬುವವರು ನೇಮಕಗೊಂಡಿದ್ದರು.[28] ಈ ಚುನಾವಣೆಯಲ್ಲಿ ಬೀದರ್‌ನಿಂದ ಜುಲ್ಪಿಕರ್ ಹಸ್ಮಿ ಹಾಗೂ ಕೋಲಾರದಲ್ಲಿ ಬಿ.ಕೃಷ್ಣಪ್ಪರವರು ಎರಡನೇ ಬಾರಿ ಸ್ಪರ್ಧಿಸಿದ್ದರು.ಆದರೆ ಬಿ.ಕೃಷ್ಣಪ್ಪನವರು ಪುನಃ ಸೋತರು. ಆದರೆ ಬೀದರ್‌ನಲ್ಲಿ 'ಜುಲ್ಫಿಕರ್ ಹಸ್ಮಿ' ಗೆದ್ದುದರಿಂದ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಬಿ.ಎಸ್.ಪಿ. ಪ್ರಮುಖ ಸ್ಥಾನವನ್ನು ಪಡೆದುಕೊಂಡಿತು.ಈ ಚುನಾವಣೆ ಪ್ರಕ್ರಿಯೆ ಮುಗಿದ ಮೇಲೆ ಕ.ದ.ಸಂ.ಸ.ವುಬಿ.ಎಸ್.ಪಿ.ಯನ್ನು ಕರ್ನಾಟಕದಲ್ಲಿ ಮತ್ತಷ್ಟು ಭದ್ರಗೊಳಿಸಿ ತಮ್ಮ ರಾಜಕೀಯ ಸ್ವಾಮ್ಯವನ್ನು ಉಳಿಸಿಕೊಳ್ಳಲು ರಾಜ್ಯದಾದ್ಯಂತ ದಲಿತರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಪ್ರಯತ್ನಿಸುತ್ತಿತ್ತು.ಈ ಸಂದರ್ಭದಲ್ಲಿ ಬಿ.ಎಸ್.ಪಿ.1997ರ ಸಮಯದಲ್ಲಿ ಕಾನ್ಷಿರಾಂರವರ ಮಾರ್ಗದರ್ಶನದಲ್ಲಿ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿದ್ದ ಈಗಿನ ಬಿ.ಎಸ್.ಪಿ.ರಾಷ್ಟ್ರಾಧ್ಯಕ್ಷೆ (2020) ಮಾಯಾವತಿಯವರು ಕೋಮುವಾದಿ ಪಕ್ಷವಾದ ಬಿ.ಜೆ.ಪಿ.ಜೊತೆ ರಾಜ್ಯದ ಅಧಿಕಾರಕ್ಕಾಗಿ ಕೈಜೋಡಿಸಿ ಮೈತ್ರಿ ಮಾಡಿಕೊಂಡರು.

ಇಂತಹ ಬೆಳವಣಿಗೆಯಿಂದಾಗಿ ಕ.ದ.ಸಂ.ಸ.ದ ಕೋಮುವಾದಿ ಬಿ.ಜೆ.ಪಿ.ಪಕ್ಷದ ವಿರೋಧಿ ಸಿದ್ಧಾಂತಕ್ಕೆ ಧಕ್ಕೆಯಾಗಿತ್ತು.ಇದರಿಂದ ಆಗ ರಾಜ್ಯ ಸಂಚಾಲಕರಾಗಿದ್ದ ಡಿ.ಜಿ.ಸಾಗರ್‌ರವರ ನೇತೃತ್ವದಲ್ಲಿ 1997ರಲ್ಲಿ ಕ.ದ.ಸಂ.ಸ.ದ ಮುಖ್ಯಕಛೇರಿ, ಬೆಂಗಳೂರಿನಲ್ಲಿ ರಾಜ್ಯಸಮಿತಿಯ ಸಭೆಗೆ ಹಾಜರಾಗಬೇಕೆಂದು ಬಿ.ಕೃಷ್ಣಪ್ಪರವರಿಗೆ ಪತ್ರ ಬರೆಯಲಾಗಿತ್ತು.ಆದರೆ ಈ ಸಭೆಗೆ ಬಿ.ಕೃಷ್ಣಪ್ಪರವರು ಗೈರುಹಾಜರಾಗಿದ್ದರು.ಇದರಿಂದ ರಾಜ್ಯಸಮಿತಿಯಲ್ಲಿ ಪರ'ವಿರೋಧ ಚರ್ಚೆಗಳು ನಡೆದು ಬಿ.ಕೃಷ್ಣಪ್ಪರವರ ಗುಂಪನ್ನು ಹೊರತುಪಡಿಸಿ ಕ.ದ.ಸಂ.ಸ.ದ ಸದಸ್ಯರು ಒಟ್ಟಾಗಿ ಬಿ.ಎಸ್.ಪಿ.ಯನ್ನು ತಮ್ಮ ರಾಜಕೀಯ ಪಕ್ಷವಲ್ಲವೆಂದುತಿರಸ್ಕರಿಸಿ ಕೈಬಿಟ್ಟರು.ಆಗ ಬಿ.ಕೃಷ್ಣಪ್ಪ, ಮಾವಳ್ಳಿ ಎಂ.ಶಂಕರ್, ಎಂ.ಜಯಣ್ಣ, ಸಿ.ಕೆ.ಮಹೇಶ್ ಮುಂತಾದವರು ಇದನ್ನು ಒಪ್ಪದೆ ಕ.ದ.ಸಂ.ಸ.ದಲ್ಲಿದ್ದುಕೊಂಡು ಬಿ.ಎಸ್.ಪಿ.ಯನ್ನು ಕಟ್ಟಲು ಮುಂದಾದರು.ಇದು ರಾಜ್ಯಸಮಿತಿಗೆ ಗೊತ್ತಾಗಿ ಇವರುಗಳು ಕ.ದ.ಸಂ.ಸ.ದ ಸಂವಿಧಾನಕ್ಕೆ ಅವಮಾನ ಮಾಡಿದ್ದಾರೆಂದು, ಇವರ ಮೇಲೆ ಶಿಸ್ತಿನ ಕ್ರಮಕೈಗೊಳ್ಳಲು ಮುಂದಾದರು.ಇದನ್ನು ವಿರೋಧಿಸಿದ ಬಿ.ಕೃಷ್ಣಪ್ಪರವರ ಗುಂಪು ಚಿತ್ರದುರ್ಗದಲ್ಲಿ ಸಭೆ ಸೇರಿ ಡಿ.ಜಿ.ಸಾಗರ್, ಮಂಗ್ಳೂರ ವಿಜಯ, ಗಂಗಾಧರ ಮೂರ್ತಿ, ದೇವೇಂದ್ರ ಹೆಗ್ಗಡೆಯವರನ್ನು ಕ.ದ.ಸಂ.ಸ.ದಿಂದ ಉಚ್ಚಾಟನೆ ಮಾಡಿದರು. ತಕ್ಷಣ ಡಿ.ಜಿ. ಸಾಗರ್‌ರವರು ಮೈಸೂರಿನಲ್ಲಿ ರಾಜ್ಯಸಮಿತಿ ಸಭೆ ಸೇರಿ ಬಿ.ಕೃಷ್ಣಪ್ಪ ಹಾಗೂ ಅವರ ಗುಂಪನ್ನು ಉಚ್ಚಾಟಿಸಿದರು.[29] ಹೀಗಾಗಿ ಇವರುಗಳ ಸಂಬಂಧ ರಾಜಕೀಯ ಭಸ್ಮಾಸುರನ ಅಗ್ನಿಯಲ್ಲಿ ಧಗಧಗ ಉರಿದು ಮತ್ತೊಂದು ಕ.ದ.ಸಂ.ಸ.ದ ಬಿರುಕಿಗೆ ಕಾರಣವಾಯಿತು.ಇಲ್ಲಿಂದ ಕ.ದ.ಸಂ.ಸ.ದ ಒಳಗಡೆ ಹಿಂದೆಂದೂ ಕಾಣದ ಎಡಗೈ-ಬಲಗೈ ಉಪಜಾತಿಗಳ ಪ್ರವೇಶವಾಯಿತು.

**೫. ಎಡಗೈ-ಬಲಗೈ ಉಪಜಾತಿಗಳ ಪ್ರವೇಶ:**

ಬಿ. ಕೃಷ್ಣಪ್ಪನವರು ಬಿ.ಎಸ್.ಪಿ.ಪಕ್ಷವನ್ನು ಬೆಂಬಲಿಸಿ ಅದರಿಂದ ಹೊರಬರದೆ ಕ.ದ.ಸಂ.ಸ.ದ ನಿಯಮಗಳಿಗೆ ವಿರುದ್ಧವಾಗಿ ನಡೆದುದಂದಿನಿಂದ ಇಲ್ಲಿ ಇದ್ದೂಇಲ್ಲದಂತಿದ್ದ ಹೊಲೆಯ–ಮಾದಿಗ (ಎಡಗೈ–ಬಲಗೈ) ಎಂಬ ಉಪಜಾತಿಗಳ ಕಲ್ಪನೆ ಬರಸಿಡಿಲಿನಂತೆ ಬಂದೆರಗಿತು.ಕ.ದ.ಸಂ.ಸ. ಪ್ರಾರಂಭವಾದಾಗಿನಿಂದಲೂ ಹೊಲೆಯ–ಮಾದಿಗ ಎಂಬ ಅಂತರ ಇದ್ದರೂ ಜಾತ್ಯತೀತವಾಗಿ ಇವರೆಲ್ಲರೂ ಚಿಂತಿಸುತ್ತಿದ್ದರಿಂದ ಅವರಲ್ಲಿ ಸಹೋದರತೆ, ಆತ್ಮೀಯತೆ ನೆಲೆಸಿತ್ತು.ಇದರಿಂದಾಗಿ ಇತರ ನಡುವೆ ಭಿನ್ನಾಭಿಪ್ರಾಯಗಳಿರಲಿಲ್ಲ. ಇದಕ್ಕೆ ಉತ್ತಮ ಉದಾಹರಣೆ ನೀಡಬಹುದಾದರೆ ಬಿ.ಕೃಷ್ಣಪ್ಪರವರು ಮಾದಿಗ ಜನಾಂಗದವರು ಎಂದು ಗೊತ್ತಿದ್ದರೂ, ಇವರನ್ನೇಕ.ದ.ಸಂ.ಸ.ದ ಪ್ರಥಮ ರಾಜ್ಯ ಸಂಚಾಲಕರನ್ನಾಗಿ ಆಯ್ಕೆ ಮಾಡಿದುದು ಎನ್ನಬಹುದು.[೩೦] ಆದರೆ ಬಿ.ಎಸ್.ಪಿ.ಯು ಕ.ದ.ಸಂ.ಸ.ದೊಳಗಡೆ ಪ್ರವೇಶ ಮಾಡಿದಂದಿನಿಂದ ಉಪಜಾತಿಗಳ ಧೋರಣೆಗೆ ಮತ್ತಷ್ಟು ಪುಷ್ಟಿಸಿಕ್ಕಿತು. ಏಕೆಂದರೆ ಬಿ.ಎಸ್.ಪಿ.ಯ ನೇತಾರರಾದ ಕಾನ್ಷಿರಾಂ, ಮಾಯಾವತಿಯವರು ಕೂಡ ಮಾದಿಗ ಸಮುದಾಯಕ್ಕೆ ಸೇರಿದ್ದರೆಂಬುದೇ ಆಗಿತ್ತು.[೩೧] ಜೊತೆಗೆ ಆಂಧ್ರಪ್ರದೇಶದಲ್ಲಿ 'ಮಾದಿಗ ದಂಡೋರ' ಎಂಬುವವರ ಮಾದಿಗರ ಸವಲತ್ತುಗಳ ಪರವಾದ ಹೋರಾಟವು ಕೂಡ ಎಡ–ಬಲ ಪರಿಕಲ್ಪನೆಗೆ ಜೀವತುಂಬಿತು.[೩೨] ಆದರೆ ಕ.ದ.ಸಂ.ಸ.ದ ಎಲ್ಲಾ ನಾಯಕರು, ಪದಾಧಿಕಾರಿಗಳು, ಸದಸ್ಯರು, ಹೊಲೆಯ–ಮಾದಿಗೆ ಎಂಬ ಉಪಜಾತಿಗಳ ಅಂತರವನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸದೆ ಸಂಘಟನೆಯ ಸಿದ್ಧಾಂತಕ್ಕೆ ಅವಮಾನ ಮಾಡಿದರು. ಅಲ್ಲದೆ ತಮ್ಮ ವ್ಯಕ್ತಿಗತ ಪ್ರತಿಷ್ಠೆಗೆ ಶರಣಾಗಿ ತಮ್ಮಗಳ ಸ್ವಾಭಿಮಾನಕ್ಕೆ ಧಕ್ಕೆ ತಂದುಕೊಂಡು ಕ.ದ.ಸಂ.ಸ.ವನ್ನು ಛಿದ್ರಛಿದ್ರಗೊಳಿಸಿದರು.ಮುಂದೆಕ.ದ.ಸಂ.ಸ.ದ ದಲಿತಪರ ಸೇವೆಯ ಮೂಲ ಲಕ್ಷಣಗಳಾಗಿದ್ದ ಶಿಸ್ತು, ಸಂಯಮ, ಸಮಯಪಾಲನೆ, ಬದ್ಧತೆ ಇಲ್ಲದಂತಾಗಿ ಇದರ ಮುಂದಾಳುಗಳಲ್ಲಿ ಅಶಿಸ್ತಿನ ಬೇಜವಾಬ್ದಾರಿತನ ಮೂರ್ತಗೊಂಡು ಸಂಘಟನೆಯ ಸಂಪೂರ್ಣ ಛಿದ್ರತೆಗೆ ಕಾರಣವಾಯಿತು.

**6. ಕ.ದ.ಸಂ.ಸ.ದ ಕಾರ್ಯಕ್ರಮಗಳ ಸಮಯ ಪಾಲನೆಯಲ್ಲಿ ಅಶಿಸ್ತು:**

ಬಿ.ಕೃಷ್ಣಪ್ಪನವರು ೧೯೯೭ರಲ್ಲಿ ಮರಣ ಹೊಂದಿದ ಮೇಲೆ ಇವರ ಗುಂಪಿನಲ್ಲಿದ್ದ ಮಾವಳ್ಳಿ ಶಂಕರ್, ಎಂ.ಜಯಣ್ಣ, ಶಿವಣ್ಣ, ಶ್ರೀಧರ್ ಕಲಿವೀರ್‌ರವರು ೨೦೦೨ರಲ್ಲಿ 'ಕ.ದ.ಸಂ.ಸ.(ಅಂಬೇಡ್ಕರ್‌ವಾದ)' ಎಂಬ ಹೆಸರಿನಲ್ಲಿ 'ಜ್ಞಾನದ ಸಂಕೇತವಾದ ಜ್ಯೋತಿ ಮತ್ತು ಪುಸ್ತಕ'ವನ್ನು ತಮ್ಮ ಸಂಘಟನೆಯ ಚಿಹ್ನೆಯನ್ನಾಗಿ ಮಾಡಿಕೊಂಡರು.[೩೩] ಕಾಲಕ್ರಮೇಣ ಇವರಲ್ಲಿಯೇ ಮಾವಳ್ಳಿ ಶಂಕರ್, ಎಂ.ಜಯಣ್ಣ, ಮೋಹನರಾಜ್‌ರವರು ವೈಯಕ್ತಿಕ ಭಿನ್ನಾಭಿಪ್ರಾಯಗಳಿಂದ ಪ್ರತ್ಯೇಕಗೊಂಡರು.

ಇವರಂತೆಯೇ ಕ.ದ.ಸಂ.ಸ.ದ ರಾಜ್ಯ ಸಂಚಾಲಕರಾಗಿದ್ದ ಡಿ.ಜಿ.ಸಾಗರ್‌ರವರ ಸರ್ವಾಧಿಕಾರತನ, ಸಮಯಪಾಲನೆಯಲ್ಲಿನ ಅಶಿಸ್ತು, ಅಹಂನ್ನು ಸಹಿಸಲಾರದೆ ೨೦೦೨ರಲ್ಲಿ ಸಂಘಟನೆಯಿಂದ ಗುರುಪ್ರಸಾದ್

ಕೆರಗೋಡುರವರು ಹೊರಬಂದು ಮತ್ತೊಂದು ಕ.ದ.ಸಂ.ಸ.ವನ್ನು ಕಟ್ಟಿಕೊಂಡು ಮುಂದೆ ಅದರ ಸಂಚಾಲಕರಾದರು.[34]ಹಾಗೆಯೇ 2004ರಲ್ಲಿ ಡಿ.ಜಿ.ಸಾಗರ್‌ರವರ ಸಂಚಾಲಕತ್ವದಲ್ಲಿ ರಾಜ್ಯ ಸಂಘಟನಾ ಸಂಚಾಲಕರಾಗಿದ್ದ ಲಕ್ಷ್ಮೀನಾರಾಯಣ ನಾಗವಾರರವರು ಪ್ರತ್ಯೇಕಗೊಂಡು ಮಗದೊಂದು ಕ.ದ.ಸಂ.ಸ.ದ ಸಂಚಾಲಕರಾದರು.[35]ತದನಂತರ ಲಕ್ಷ್ಮೀನಾರಾಯಣ ನಾಗವಾರರವರ ಗುಂಪಿನಿಂದ ಅಣ್ಣಯ್ಯ, ರಾಮಚಂದ್ರ ಎಂಬುವವರು ಹೊರಬಂದರು.[36]ಇದೇ ರೀತಿಯ ಆಂತರಿಕ ಭಿನ್ನಾಭಿಪ್ರಾಯಗಳು, ವೈಯುಕ್ತಿಕ ಪ್ರತಿಷ್ಠೆ, ಸಂಘಟನೆಯ ಪದಾಧಿಕಾರಿಗಳನ್ನು ಪರಸ್ಪರ ನೋಡುವ, ಮಾತನಾಡುವ, ಯೋಗಕ್ಷೇಮ ವಿಚಾರಿಸುವ ಉತ್ತಮ ಸಂಬಂಧಕ್ಕೆ ಬೆಂಕಿಬಿದ್ದು ಶೀತಲ ಸಮರದ ವಿಷಮ ಮನಸ್ಥಿತಿಗಳು ಕ.ದ.ಸಂ.ಸ.ದ ಜಿಲ್ಲೆ, ತಾಲ್ಲೂಕು, ಹೋಬಳಿ ಮಟ್ಟದ ಶಾಖೆಗಳಲ್ಲೂ ಉಲ್ಬಣವಾಗಿ ಸಂಘಟನೆ ಒಡೆದ ಕನ್ನಡಿಯಾಯಿತು.

ಬಂಡಾಯ ಸಾಹಿತಿಯಾದ ಬರಗೂರು ರಾಮಚಂದ್ರಪ್ಪನವರು 'ಕ.ದ.ಸಂ.ಸ. ಹುಟ್ಟಿರೋದು ರಾಜಕೀಯ ಸಂಘಟನೆಯಾಗಿ ಅಲ್ಲ. ಆದ್ದರಿಂದ ಇದು ರಾಜಕೀಯ ಪ್ರವೇಶ ಮಾಡೋದು ಸರಿಯಲ್ಲ. ಹಾಗೇನಾದರೂ ಮಾಡಲೇಬೇಕು ಅಂದ್ರೆ ರಾಜಕೀಯದ ಒಳಅರ್ಥಗಳನ್ನು ಗ್ರಹಿಸಿಕೊಂಡು ಮುಂದಿನ ತೀರ್ಮಾನಗಳನ್ನು ಕೈಗೊಳ್ಳಬೇಕು.ಅಲ್ಲದೆ ರಾಜಕೀಯ ಪ್ರವೇಶಿಸಲು ನಿರ್ಧರಿಸಿದರೆ ಕನಿಷ್ಟ 5 ವರ್ಷವಾದರೂ ಸಿದ್ಧತೆ ನಡೆಸಬೇಕು.ಇದಾವುದನ್ನು ಮಾಡದೇ ಕ.ದ.ಸಂ.ಸ. ಏಕಾಏಕಿ ರಾಜಕೀಯ ಪ್ರವೇಶ ಮಾಡಿದರೆ ಅದರ ಆತ್ಮಹತ್ಯೆ ಪ್ರಾರಂಭವಾಗುತ್ತದೆ.ಪ್ರವೇಶ ಮಾಡಿದ ಮೇಲೆ ಅದರ ಅಂತ್ಯವಾಗುತ್ತದೆ' ಎಂದು ಹೇಳಿದ್ದರು.[37] ಇದೇ ಇವತ್ತಿನ ಕ.ದ.ಸಂ.ಸ.ದದುಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ.

- **ಸಮಾರೋಪ:**

ಕ.ದ.ಸಂ.ಸ.ವು ಒಂದು ರಾಜಕೀಯೇತರ ಸಂಘಟನೆಯಾಗಿ ದಲಿತ ಸಮುದಾಯದ ನಾಯಕರಿಗೆ ಪ್ರತ್ಯೇಕ ಪಕ್ಷ ಸಂಘಟನೆಗೆ ಪ್ರೇರೇಪಿಸುವುದರ ಮೂಲಕ ರಾಜಕೀಯದಲ್ಲಿ ಏಳಿಗೆಯನ್ನು ಸಾಧಿಸಲು ಪ್ರೋತ್ಸಾಹ ಮತ್ತು ಸಹಕಾರಗಳನ್ನು ಕೊಡಬಹುದಿತ್ತು.ಇದರಲ್ಲಿ ಯಶಸ್ಸು ಸಾಧಿಸಿದ್ದರೆ ಕ.ದ.ಸಂ.ಸ.ವೂ ಕೂಡ ಪ್ರಸ್ತುತ ಬಿಜೆಪಿಪಕ್ಷದ ಕೇಂದ್ರ ಹಾಗೂ ಬಹುತೇಕ ರಾಜ್ಯಗಳಲ್ಲಿ ರಾಜಕೀಯ ಅಧಿಕಾರ ಹಿಡಿಯಲು ಕಾರಣವಾಗಿರುವ ಆರ್.ಎಸ್.ಎಸ್., ಭಜರಂಗದಳ, ವಿಶ್ವ ಹಿಂದೂ ಪರಿಷತ್ತು, ಎ.ಬಿ.ವಿ.ಪಿ.ಇತ್ಯಾದಿ ರಾಜಕೀಯೇತರ ಸಂಘಟನೆಗಳ ಸಾಲಿನಲ್ಲಿ ರಾರಾಜಿಸಬಹುದಿತ್ತು.ಆದರೆ ಕ.ದ.ಸಂ.ಸ.ವು ಈ ರೀತಿ ಮಾಡದೆ ರಾಜಕೀಯ ಪ್ರಬುದ್ಧತೆಯಿಲ್ಲದ ದುಡುಕಿನ ನಿರ್ಧಾರದಿಂದ ಇಂದು ಮತ್ತೆ ಸೇರಿಸಲಾಗದ ಒಡೆದ ಕನ್ನಡಿಯಾಗಿ ತನ್ನ ಎಪ್ಪತ್ತರ ದಶಕದ ಪರಿಶುದ್ಧವಾದ ಏಕೀಕೃತ ರೂಪವನ್ನು ವಿಕಾರಗೊಳಿಸಿಕೊಂಡು ಛಿದ್ರಛಿದ್ರವಾಗಿ ಬೇರ್ಪಟ್ಟಿವೆ. ಜೊತೆಗೆ ತಮ್ಮ ಸ್ವಾಭಿಮಾನದ ಹೋರಾಟಕ್ಕೆ ಎಳ್ಳುನೀರು ಬಿಟ್ಟು ರಾಜ್ಯದ ರಾಜಕೀಯ ಪಕ್ಷಗಳ ಏಜೆಂಟರುಗಳಾಗಿ ಹಣದ ವ್ಯಾಮೋಹ, ವೈಯಕ್ತಿಕ ಪ್ರತಿಷ್ಟೆಯ ಆರಾಧಕರಾಗಿದ್ದಾರೆ.

ಅಲ್ಲದೆ ಕ.ದ.ಸಂ.ಸ.ದ ಎಲ್ಲಾ ಬಣಗಳನ್ನು ಒಂದುಮಾಡಲು ಎಷ್ಟೇ ಪ್ರಯತ್ನಗಳಾದರೂ ಇವುಗಳ ನಾಯಕರುಗಳುಒಂದೇ ತಕ್ಕಡಿಯಲ್ಲಿಟ್ಟಕಪ್ಪೆಗಳಂತಾಗಿದ್ದಾರೆ ಎಂದು ಹೇಳಬಹುದು.

- **ಕೊನೆಟಿಪ್ಪಣಿಗಳು:**

1. ದೇವನೂರು ಮಹಾದೇವ (ಮಾಜಿ ರಾಜ್ಯ ಸಂಚಾಲಕರು, ಕ.ದ.ಸಂ.ಸ. ಹಾಗೂ ದಲಿತಪರ ಕವಿಗಳು ಮತ್ತು ಹೋರಾಟಗಾರರು, ಮೈಸೂರು) ರವರ ಸಂದರ್ಶನ, ಶನಿವಾರ, 8 ಜನವರಿ, 2011.
2. ಅರವಿಂದ ಮಾಲಗತ್ತಿ (ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು) ರವರ ಸಂದರ್ಶನ, ಮಂಗಳವಾರ, 12 ಅಕ್ಟೋಬರ್, 2010.
3. ಹೆಚ್. ಗೋವಿಂದಯ್ಯ (ನಿವೃತ್ತ ಪ್ರಾಧ್ಯಾಪಕರು ಹಾಗೂ ಕ.ದ.ಸಂ.ಸ. ಹೋರಾಟಗಾರರು ಮತ್ತು ಕವಿಗಳು, ಪಂಚಮ ಪತ್ರಿಕೆಯ ಸಂಪಾದಕರು, ಮೈಸೂರು) ರವರ ಸಂದರ್ಶನ, ಭಾನುವಾರ, 2 ಜನವರಿ, 2011.
4. ಎಸ್. ಗಣೇಶನ್, ದಲಿತರ ಮೇಲಿನ ದೌರ್ಜನ್ಯಗಳು, 1981, ಪುಟ7-11.
5. ಗುರುಪ್ರಸಾದ್ ಕೆರಗೋಡು (ಕ.ದ.ಸಂ.ಸ. ರಾಜ್ಯ ಸಂಚಾಲಕರು, ಮಂಡ್ಯ) ರವರ ಸಂದರ್ಶನ, ಭಾನುವಾರ, 19 ಡಿಸೆಂಬರ್, 2010.
6. ಪಂಚಮ, ದಲಿತ-ರೈತ ಚಳವಳಿ ವಿಷೇಶಾಂಕ, ಸಂಪುಟ6, ಸಂಚಿಕೆ21, ನವೆಂಬರ್ 5-20, 1984, ಪುಟ75.
7. ಸುತ್ತೋಲೆ, ಕ.ದ.ಸಂ.ಸ. ರಾಜ್ಯಸಮಿತಿ ಸಭೆ, ಮಾರ್ಚ್10-11, 1985, ಬೆಂಗಳೂರು.
8. ಸುತ್ತೋಲೆ, ಕ.ದ.ಸಂ.ಸ. ರಾಜ್ಯಸಮಿತಿ ಸಭೆ, ಮೇ11, 1986, ಸಂಪಂಗಿನಗರ, ಬೆಂಗಳೂರು.
9. ಪಂಚಮ, ದ.ಸಂ.ಸ. ರಾಜ್ಯಸಂಚಾಲಕರಾಗಿ ಬಿ.ವಿ. ಚಂದ್ರಪ್ರಸಾದ್ ತ್ಯಾಗಿ, ಸಂಪುಟ11, ಸಂಚಿಕೆ 3-4, ಫೆಬ್ರವರಿ 1987, ಪು1.
10. ಸುತ್ತೋಲೆ, ಕ.ದ.ಸಂ.ಸ. (ರಿ), ರಾಜ್ಯಸಮಿತಿ, ಕಾರ್ಪೋರೇಷನ್ ಕಟ್ಟಡ, ರೂ. ನಂ. 72. ಬೆಂಗಳೂರು.
11. ಸುತ್ತೋಲೆ, ಕ.ದ.ಸಂ.ಸ. (ರಿ), ರಾಜ್ಯಸಮಿತಿ, ದಿನಾಂಕ: 4.2.1994, ಕಾರ್ಪೋರೇಷನ್ ಕಟ್ಟಡ, ರೂ. ನಂ. 72. ಬೆಂಗಳೂರು.

12. ಲಿಂಗರಾಜು ಹೆಬ್ಬಾಲೆ, ದ.ಸಂ.ಸ.ದಲ್ಲಿ ನನ್ನ ಹಾಡುಪಾಡು, ಪುಟ2.ಹಾಗೂ ಇವರ ಸಂದರ್ಶನ, ಗುರುವಾರ, 10 ಡಿಸೆಂಬರ್, 2010.
13. ದೇವನೂರು ಮಹಾದೇವ (ಮಾಜಿ ರಾಜ್ಯ ಸಂಚಾಲಕರು, ಕ.ದ.ಸಂ.ಸ. ಹಾಗೂ ದಲಿತಪರ ಕವಿಗಳು ಮತ್ತು ಹೋರಾಟಗಾರರು, ಮೈಸೂರು) ರವರ ಸಂದರ್ಶನ, ಶನಿವಾರ, 8 ಜನವರಿ, 2011.
14. ಪಂಚಮ, ದಲಿತ–ರೈತ ಚಳವಳಿ ವಿಷೇಶಾಂಕ, ಸಂಪುಟ6, ಸಂಚಿಕೆ21, ನವೆಂಬರ್ 5–20, 1984, ಪುಟ12.
15. ರಾಮದೇವ ರಾಕೆ (ಪಂಚಮ ಪತ್ರಿಕೆಯ ವರದಿಗಾರರು ಮತ್ತು ಸಂಪಾದಕರು, ಮಂಡ್ಯ) ರವರ ಸಂದರ್ಶನ, ಭಾನುವಾರ, 16 ಜನವರಿ, 2011.
16. ಪಂಚಮ, ದಲಿತ–ರೈತ ಚಳವಳಿ ವಿಷೇಶಾಂಕ, ಸಂಪುಟ6, ಸಂಚಿಕೆ21, ನವೆಂಬರ್ 5–20, 1984, ಪುಟ90–91.
17. ದೇವನೂರು ಮಹಾದೇವ (ಮಾಜಿ ರಾಜ್ಯ ಸಂಚಾಲಕರು, ಕ.ದ.ಸಂ.ಸ. ಹಾಗೂ ದಲಿತಪರ ಕವಿಗಳು ಮತ್ತು ಹೋರಾಟಗಾರರು, ಮೈಸೂರು) ರವರ ಸಂದರ್ಶನ, ಶನಿವಾರ, 8 ಜನವರಿ, 2011.
18. ಹೆಚ್. ಗೋವಿಂದಯ್ಯ (ನಿವೃತ್ತ ಪ್ರಾಧ್ಯಾಪಕರು ಹಾಗೂ ಕ.ದ.ಸಂ.ಸ. ಹೋರಾಟಗಾರರು ಮತ್ತು ಕವಿಗಳು, ಪಂಚಮ ಪತ್ರಿಕೆಯ ಸಂಪಾದಕರು, ಮೈಸೂರು) ರವರ ಸಂದರ್ಶನ, ಭಾನುವಾರ, 2 ಜನವರಿ, 2011.
19. ಪ್ರಧಾನ ಸಂಪಾದಕರು– ಅರವಿಂದ ಮಾಲಗತ್ತಿ, ಲೇಖಕರು– ಗಂಗಾರಾಂ ಚಂಡಾಳ, ಲೇಖನ– ದಲಿತ ಚಳವಳಿ ಸ್ವರೂಪ, ನಾಯಕತ್ವ: ರಾಜಕೀಯ ನಿಲುವುಗಳು, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ2, ದಲಿತ ಚಳವಳಿ, 2014, ಪುಟ715.
20. ಹೆಚ್. ಗೋವಿಂದಯ್ಯ (ನಿವೃತ್ತ ಪ್ರಾಧ್ಯಾಪಕರು ಹಾಗೂ ಕ.ದ.ಸಂ.ಸ. ಹೋರಾಟಗಾರರು ಮತ್ತು ಕವಿಗಳು, ಪಂಚಮ ಪತ್ರಿಕೆಯ ಸಂಪಾದಕರು, ಮೈಸೂರು) ರವರ ಸಂದರ್ಶನ, ಭಾನುವಾರ, 2 ಜನವರಿ, 2011.
21. ಸುತ್ತೋಲೆ, ಕ.ದ.ಸಂ.ಸ. ರಾಜ್ಯಸಮಿತಿ, ದಿನಾಂಕ: 5.1.1987.
22. ಎಂ. ವೆಂಕಟಸ್ವಾಮಿ (ರಾಜ್ಯಾಧ್ಯಕ್ಷರು, ಸಮತಾ ಸೈನಿಕ ದಳ, ಬೆಂಗಳೂರು)ರವರ ಸಂದರ್ಶನ, ಶುಕ್ರವಾರ, 7 ಜನವರಿ, 2011.

23. Google chrone, Manyawar Kanshiramji, Pp1.

24. ಲಕ್ಷ್ಮಣ ತೆಲಗಾವಿ,ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು ಏಕೀಕರಣೋತ್ತರ ಕರ್ನಾಟಕ, ಸಂಪುಟ5, 1999, ಪುಟ109–110.

25. ದೇವನೂರು ಮಹಾದೇವ (ಮಾಜಿ ರಾಜ್ಯ ಸಂಚಾಲಕರು, ಕ.ದ.ಸಂ.ಸ. ಹಾಗೂ ದಲಿತಪರ ಕವಿಗಳು ಮತ್ತು ಹೋರಾಟಗಾರರು, ಮೈಸೂರು) ರವರ ಸಂದರ್ಶನ, ಶನಿವಾರ, 8 ಜನವರಿ, 2011.

26. ಕೋಟಗಾನಹಳ್ಳಿ ರಾಮಯ್ಯ (ಕವಿಗಳು ಮತ್ತು ಹೋರಾಟಗಾರರು, ಕ.ದ.ಸಂ.ಸ., ಕೋಲಾರ) ರವರ ಸಂದರ್ಶನ, ಸೋಮವಾರ, 20 ಡಿಸೆಂಬರ್, 2010.

27. ಡಿ.ಜಿ. ಸಾಗರ್ (ರಾಜ್ಯ ಸಂಚಾಲಕರು, ಕ.ದ.ಸಂ.ಸ.) ರವರ ಸಂದರ್ಶನ, ಮಂಗಳವಾರ, 15 ಫೆಬ್ರವರಿ, 2011.

28. ಸುತ್ತೋಲೆ, ಕ.ದ.ಸಂ.ಸ. (ರಿ), ರಾಜ್ಯಸಮಿತಿ, ಕಾರ್ಪೋರೇಷನ್ ಕಟ್ಟಡ, ರೂ. ನಂ. 72. ಬೆಂಗಳೂರು.

29. ಡಿ.ಜಿ. ಸಾಗರ್ (ರಾಜ್ಯ ಸಂಚಾಲಕರು, ಕ.ದ.ಸಂ.ಸ.) ರವರ ಸಂದರ್ಶನ, ಮಂಗಳವಾರ, 15 ಫೆಬ್ರವರಿ, 2011.

30. ಸಿದ್ದಲಿಂಗಯ್ಯ (ದಲಿತ ಕವಿಗಳು ಹಾಗೂ ಹೋರಾಟಗಾರರು, ಕ.ದ.ಸಂ.ಸ., ಬೆಂಗಳೂರು.) ರವರ ಸಂದರ್ಶನ

31. ಕೆ.ಟಿ. ಶಿವಪ್ರಸಾದ್ (ರಾಜ್ಯ ರೈತಸಂಘದ ನಾಯಕರು ಹಾಗೂ ಅಂತರರಾಷ್ಟ್ರೀಯ ಮಟ್ಟದ ಚಿತ್ರ ಕಲಾವಿದರು, ಹಾಸನ.) ರವರ ಸಂದರ್ಶನ, ಸೋಮವಾರ, 15 ನವೆಂಬರ್, 2010

32. ಲಕ್ಷ್ಮಣ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು ಏಕೀಕರಣೋತ್ತರ ಕರ್ನಾಟಕ, ಸಂಪುಟ5, 1999, ಪುಟ143.

33. ಮಾವಳ್ಳಿ ಶಂಕರ್ (ರಾಜ್ಯಸಂಚಾಲಕರು, ಕ.ದ.ಸಂ.ಸ. (ಅಂಬೇಡ್ಕರ್‌ವಾದ), ಬೆಂಗಳೂರು) ರವರ ಸಂದರ್ಶನ, ಸೋಮವಾರ, 13 ಡಿಸೆಂಬರ್, 2010.

34. ಗುರುಪ್ರಸಾದ್ ಕೆರಗೋಡು (ಕ.ದ.ಸಂ.ಸ. ರಾಜ್ಯ ಸಂಚಾಲಕರು, ಮಂಡ್ಯ) ರವರ ಸಂದರ್ಶನ, ಭಾನುವಾರ, 19 ಡಿಸೆಂಬರ್, 2010.

35. ಲಕ್ಷ್ಮೀನಾರಾಯಣ ನಾಗವಾರ (ರಾಜ್ಯಸಂಚಾಲಕರು, ಕ.ದ.ಸಂ.ಸ. ಬೆಂಗಳೂರು) ರವರ ಸಂದರ್ಶನ, ಗುರುವಾರ, 16 ಡಿಸೆಂಬರ್, 2010.

36. ಗುರುಪ್ರಸಾದ್ ಕೆರಗೋಡು (ಕ.ದ.ಸಂ.ಸ. ರಾಜ್ಯ ಸಂಚಾಲಕರು, ಮಂಡ್ಯ) ರವರ ಸಂದರ್ಶನ, ಭಾನುವಾರ, 19 ಡಿಸೆಂಬರ್, 2010.

37. ಬರಗೂರು ರಾಮಚಂದ್ರಪ್ಪ (ಪ್ರಗತಿಪರ ಚಿಂತಕರು ಮತ್ತು ಬಂಡಾಯ ಸಾಹಿತಿಗಳು, ಬೆಂಗಳೂರು) ರವರ ಸಂದರ್ಶನ, ಶುಕ್ರವಾರ, 7 ಜನವರಿ, 2011.